Q:1558

ಶ್ರೀ ಬಾಬುರಾವ್ ಚವ್ಹಾಣ (ಶಹಾಬಾದ್) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗ ಜಿಲ್ಲೆಯ ಚಿತ್ತಾಪುರ ತಾಲ್ಲೂಕು ಮತ್ತು ಗುಲ್ಬರ್ಗ ತಾಲ್ಲೂಕುಗಳಲ್ಲಿ ಬರುವ ಪರವಾನಗಿ ಪಡೆದ ಹಾಗೂ ಪರವಾನಗಿ ಇಲ್ಲದ ಕಲ್ಲುಗಣಿಗಳೆಷ್ಟು?

ಆ) ಪರವಾನಗಿ ಇಲ್ಲದೆ ನಡೆಯುತ್ತಿರುವ ಗಣಿಗಳ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇ) ಈಗಲಾದರೂ ಸರ್ಕಾರದವರು ತಮ್ಮ ಕಾನೂನಿನಲ್ಲಿ ಬದಲಾವಣೆ ತಂದು ಅನಧಿಕೃತವಾಗಿ ನಡೆಯುತ್ತಿರುವ ಕಲ್ಲುಗಣಿಗಳನ್ನು ತಡೆಯಲು ಕೈಗೊಳ್ಳಲಾಗುವುದೇ?

ಶ್ರೀ ಡಿ.ಎ.ಚಿಣ್ಣಪ್ಪ (ಗಣಿ ಮತ್ತು ವಿಜ್ಞಾನ ರಾಜ್ಯ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನಲ್ಲಿ 48 ಗುತ್ತಿಗೆಗಳು ಹಾಗೂ ಗುಲ್ಬರ್ಗಾ ತಾಲ್ಲೂಕಿನಲ್ಲಿ 3 ಗುತ್ತಿಗೆಗಳಿರುತ್ತದೆ. ಅನಧಿಕೃತ ಕಲ್ಲುಗಣಿಗಳ ವಿವರವಿಲ್ಲ.

ಆ) ಸರ್ಕಾರ ಅನಧಿಕೃತ ಗಣಿಗಾರಿಕೆ ತಡೆಯಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ಅನಧಿಕೃತ ಕಲ್ಲುಗಣಿ ನಡೆಯುವ ಸ್ಥಳಗಳ ಮೇಲೆ ಅನಿರೀಕ್ಷಿತ ದಾಳಿ ನಡೆಸುವುದು.
2. ಗುಲ್ಬರ್ಗಾ-ಆಳಂದ ರಸ್ತೆಯಲ್ಲಿ ಚೆಕ್ ಪೋಸ್ಟ್ ತೆರೆದು ಖನಿಜ ಸಾಗಿಸುವ ವಾಹನಗಳನ್ನು ತಪಾಸಣೆ ನಡೆಸುವುದು. ಪರವಾನಗಿ ಇಲ್ಲದೆ ಸಾಗಿಸುವ ಕಲ್ಲುಗಳ ಮೇಲೆ ರಾಜಧನ ಹಾಗೂ ದಂಡ ವಸೂಲಿ ಮಾಡುವುದು.
3. ಕಂದಾಯ ಇಲಾಖೆಯ ಉಪವಿಭಾಗ, ತಾಲೂಕು ಮತ್ತು ಹೋಬಳಿ ಮಟ್ಟದ ಅಧಿಕಾರಿಗಳಿಗೂ ಕ.ಉ.ಖ.ರಿ. ನಿಯಮ 1969ರ ಪ್ರಕಾರ ಅಧಿಕಾರ ನೀಡಲಾಗಿದೆ. ಆದುದರಿಂದ ಕಂದಾಯ ಇಲಾಖೆಯ ಅಧಿಕಾರಿಗಳ ಸಹಕಾರದೊಡನೆ ಅನಧಿಕೃತ ಕಲ್ಲುಗಣಿ ಕಾರ್ಯ ನಿಲ್ಲಿಸಲು ಸತತ ಪ್ರಯತ್ನ ಮಾಡಲಾಗುತ್ತಿದೆ.

ಇ) ಹೌದು, ಮೇಲಿನ ಕಾಲಂ (ಅ) ದಲ್ಲಿ ತಿಳಿಸಿರುವ ಕ್ರಮಗಳ ಜೊತೆಗೆ ಇತರ ಕ್ರಮಗಳಾವುವೆಂದರೆ ಶಹಾಬಾದ್ ಶಿಲೆಯ ಕಲ್ಲು ಗಣಿಗಾರಿಕೆಯಲ್ಲಿ ಬಡ ಜನರೇ ಹೆಚ್ಚಾಗಿದ್ದು, ಅವರ ಜೀವನೋಪಾಯ ಈ ಕಲ್ಲುಗಣಿಗಾರಿಕೆಯ ಮೇಲೆಯೇ ಇರುವುದು. ಆದ್ದರಿಂದ, ಅನಧಿಕೃತವಾಗಿ ಈ ಕಲ್ಲುಗಣಿಗಾರಿಕೆಯಲ್ಲಿ ನಿರತರಾಗಿರುವವರನ್ನು ಗುರುತಿಸಿ, ಅವರನ್ನು ಕಲ್ಲುಗಣಿಗುತ್ತಿಗೆ ಪಡೆದೇ ಕೆಲಸಮಾಡಬೇಕೆಂದು ನಿರ್ಬಂಧಿಸಲಾಗುತ್ತದೆ. ಅನಧಿಕೃತ ಸಾಗಣೆಯನ್ನು ತಡೆಯಲು ಗುಲ್ಬರ್ಗ ರೈಲ್ವೆ ಇಲಾಖೆಯವರ ಸಹಕಾರವನ್ನು ಸಹ ಕೋರಲಾಗಿದೆ.

<u>ವಿಷಯ :- ರಾಜ್ಯದ ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿನಿಲಯಗಳ ಪರಿಸ್ಥಿತಿ.</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 714 (1556)
ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಕುಡಿಯುವ ನೀರಿನ ಕೊರತೆ, ಪೌಷ್ಟಿಕಾಂಶವಿಲ್ಲದ ಆಹಾರ ಸರಬರಾಜು ಹಾಗೂ ಶೌಚಾಲಯದ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು. ಕೆಲವು ವಿದ್ಯಾರ್ಥಿನಿಲಯಗಳಲ್ಲಿ ಕುಡಿಯುವ ನೀರಿನ ಹಾಗೂ ಶೌಚಾಲಯದ ಕೊರತೆ ಇದೆ.

ಆ) ಸ್ವಂತ ಕಟ್ಟಡ ನಿರ್ಮಾಣ ಹಾಗೂ ವಿದ್ಯಾರ್ಥಿ ನಿಲಯಗಳ ದುರಸ್ತಿ ಮಾಡುವ ಮೂಲಕ ನೀರಿನ ಕೊರತೆ, ಶೌಚಾಲಯ ಕೊರತೆ ಸಮಸ್ಯೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕಾಗಿ ಅಂಬೇಡ್ಕರ್ ಶತಾಬ್ದಿ ಕಾರ್ಯಕ್ರಮಗಳ ಅಂಗವಾಗಿ 3.00 ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದ್ದು, ಈ ಪೈಕಿ ಈಗಾಗಲೇ 2.00 ಕೋಟಿ 16 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ.

1ನೇ ಡಿಸೆಂಬರ್ 92ರ ಮಾಹೆಯಿಂದ ಹೆಚ್ಚಿಸಲಾಗಿರುವ ಬೋಜನ ವೆಚ್ಚವನ್ನು ರೂ.150-00ಗಳಿಂದ ರೂ.250-00ಗಳಿಗೆ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಕ್ಕೆ ಹಾಗೂ ರೂ .200-00 ಗಳಿಂದ ರೂ.300-00 ಗಳವರೆಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಕ್ಕೆ ಹೆಚ್ಚಿಸಿರುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪೌಷ್ಟಿಕವಿರುವ ಆಹಾರ ನೀಡಲು ಸಾಧ್ಯವಾಗುತ್ತಿದೆ.

<u>ವಿಷಯ :- ರಾಜ್ಯದ ಪುರಸಭೆ / ನಗರಸಭೆಗಳಲ್ಲಿ, ಪರಿಶಿಷ್ಟ ಜಾತಿ / ವರ್ಗಕ್ಕೆ ಮೀಸಲಿಟ್ಟ ಹಣದಲ್ಲಿ ಖರ್ಚಾಗುತ್ತಿರುವ ಹಣ.</u>

Q:1559
ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದ ವಿವಿಧ ಪುರಸಭೆ ಹಾಗೂ ನಗರ ಸಭೆಗಳಲ್ಲಿ ಪರಿಶಿಷ್ಟ ಜಾತಿ : ವರ್ಗಕ್ಕೆ ಮೀಸಲಿಟ್ಟಿರುವ ಹಣದಲ್ಲಿ ಶೇಕಡವಾರು ಖರ್ಚಾಗುತ್ತಿರುವ ಹಣ ಎಷ್ಟು? (ಪುರಸಭೆ ಹಾಗೂ ನಗರಸಭಾವಾರು ವಿವರಗಳನ್ನು ಕೊಡುವುದು)

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :